

# ದಸರೆಗೆ ಬಂದ ಅತಿಥಿಗಳು!

ಇವರು ಕರೆಯದೇ ಬರುವ ಅತಿಥಿಗಳು! ಇವರಿಗಾಗಿ ಮೈಸೂರಿನ ಉದ್ದಗಲಕ್ಕೂ ಮಧುಶಾಲೆಗಳೇ ತೆರೆದು ನಿಂತಿವೆ.

■ ಚಿತ್ರ ಲೇಖನ:
**ಬಿ.ವಿ.ರಶ್ಮಿ**



ಮೈಸೂರು ಹೇಳಿ ಕೇಳಿ ಪ್ರವಾಸಿಗರ ಸ್ವರ್ಗ. ದಸರಾ ಬಂದರಂತೂ ಮೈಸೂರಿಗೆ ಪ್ರವಾಸಿಗಳ ದಂಡೇ ಬಂದಿಳಿಯುತ್ತದೆ. ಅತಿಥಿ ಸತ್ಕಾರಕ್ಕೆ ಮೈಸೂರು ಸಂಭ್ರಮದಿಂದ ಸಿದ್ಧವಾಗುತ್ತದೆ. ಲಾಡ್ಜ್‌ಗಳು, ರೆಸಾರ್ಟ್‌ಗಳು, ಪ್ರವಾಸಿ ಮಂದಿರಗಳು, ಅಷ್ಟೇ ಏಕೆ ಮೈಸೂರಿನ ಹಲವು ಮನೆಗಳು ಈ ವೇಳೆಯಲ್ಲಿ ಹೋಮ್ ಸ್ಟೇ ಅತಿಥಿಗೃಹಗಳಾಗಿ ಪರಿವರ್ತನೆಯಾಗುತ್ತವೆ.

ಇವೆಲ್ಲ ಕರೆದು ಬರುವ ಅತಿಥಿಗಳಿಗಾಗಿ. ಆದರೆ ಮೈಸೂರಿಗೆ ದಸರೆಯ ಸಂದರ್ಭದಲ್ಲೇ ಕರೆಯದೇ ಬರುವ ಸಾವಿರಾರು ಅತಿಥಿಗಳಿದ್ದಾರೆ! ನಮ್ಮ ನಿಮ್ಮಂತೆ ಇವರು ಕಾರು, ಬಸ್ಸು, ರೈಲುಗಳಲ್ಲಿ ಬಂದಿಳಿಯುವುದಿಲ್ಲ. ಗಾಳಿಯಲ್ಲಿ ಹಾರುತ್ತಲೇ ಬರುತ್ತಾರೆ. ಇವರು ನಮ್ಮ ನಿಮ್ಮಂತೆ ದಸರಾ ಉತ್ಸವವನ್ನು ನೋಡಲು ಬರುವುದಿಲ್ಲ. ಇವರ ಆಸಕ್ತಿಯೇ ಬೇರೆ. ಮೈಸೂರಿನ ಹೂತೋಟಗಳಿಗೆ ಭೇಟಿ ನೀಡಲು ಇವರು ಬರುತ್ತಾರೆ.

(8ನೇ ಪುಟ ನೋಡಿ)